“ಥೂ, ಇವನು ನನಗೆ ಮತ್ತು ಅವನ ಹೆಂಡಿರಿಗೆ ಮೋಸ ಮಾಡಿದ್ದಾನೆ, ಸುಳ್ಳು ಹೇಳಿದ್ದಾನೆ.”

ಕೂಡಲೇ ತನ್ನ ಬಳಿ ಇದ್ದ ಔಷಧ ಮತ್ತು ಮದ್ದುಗಳನ್ನು ಸೊಸೆಯರಿಗೆ ಆಗಿದ್ದ ಗಾಯಗಳಿಗೆ ಲೇಪಿಸಿದಳು. ನಂತರ ದೇಹಗಳನ್ನು ಇರುವೆಗೂಡಿನಲ್ಲಿ ಇರಿಸಿದಳು. ಇರುವೆಗಳು ಅವುಗಳ ಮೇಲೆ ಓಡಾಡಿದಂತೆ ದೇಹಗಳು ವಿಲಿವಿಲಿ ಒದ್ದಾಡಲಾರಂಭಿಸಿದವು. ಅವಕ್ಕೆ ಪ್ರಾಣ ಹಿಂತಿರುಗಿ ಬಂದಿತ್ತು. ಕೆಲವೇ ನಿಮಿಷಗಳ ನಂತರ ಅವು ಚಲಿಸಲಾರಂಭಿಸಿದವು.

ಮರುಜನ್ಮ ಪಡೆದ ಸೊಸೆಯರನ್ನು ಮನೆಗೆ ಕೊಂಡೊಯ್ದಳು ತಾಯಿ. ಮಗನನ್ನು ಕರೆದು ಹೇಳಿದಳು,

“ನಾನು ಹಿಂದೆ ನನ್ನ ವಿದ್ಯೆಯನ್ನು ಬಳಸಿ ನಿನಗೆ ಹೊಸ ಜೀವ ಕೊಟ್ಟೆ, ಈಗ ಸತ್ತ ನಿನ್ನ ಹೆಂಡಿರನ್ನು ಬದುಕಿಸಿದ್ದೇನೆ. ಆದ್ದರಿಂದ ಈಗ ನೀವೆಲ್ಲರೂ ನನ್ನವರು, ನನ್ನ ಸ್ವತ್ತು. ನೀವು ಮೂವರೂ ಸರಿಯಾಗಿ ಜೀವನ ನಡೆಸಿ, ಶಾಂತಿಯಿಂದ ಇರಬೇಕು ಎಂಬುದು ನನ್ನ ಆಜ್ಞೆ. ಮತ್ತೆ ಒಬ್ಬರಿಗೊಬ್ಬರು ಮೋಸ ಮಾಡಿ, ಪ್ರಾಣ ಕಳೆದುಕೊಂಡರೆ, ನಾನು ಬಂದು ರಕ್ಷಣೆ ಮಾಡಲಾರೆ.’’

ಎಲ್ಲರೂ ಬಹುಕಾಲ ಸುಖ, ಶಾಂತಿಯಿಂದ ಬದುಕಿದ್ದರು. ತಾಯಿ ಕೆಲ ಕಾಲದ ನಂತರ ಸತ್ತಳು. ಆಗ ಜಗಜಗಿಸುವ ನಕ್ಷತ್ರವೊಂದು ರಮಣೀಯ ಬೆಳಕನ್ನು ಕಾರಿ ಭೂಮಿಗೆ ಧಾವಿಸಿ ಬಿತ್ತು. ಗುಡುಗು, ಸಿಡಿಲು ಎಲ್ಲವೂ ಆರ್ಭಟಿಸಿದವು. ಹಲ್ಲಿಗಳೆಲ್ಲಾ ತಮ್ಮ ತಮ್ಮಲ್ಲಿಯೇ ಹೇಳಿಕೊಂಡವು–

“ಯಾವುದೋ ಮಹಾ ವೈದ್ಯ ಸತ್ತಿರಬೇಕು.ಇದೇ ಅದರ ಚಿಹ್ನೆ.”

ಸೊಸೆಯರು ಸತ್ತಾಗ ಅವರ ದೇಹಗಳು ಆಕಾಶಕ್ಕೆ ಹೋದವು. ಅವು ಅಲ್ಲಿ ಕೆಂಪು ತಾರೆ “ಗ್ವೈಬಿಲ್ಲಾ’’ (Gwaibillah, ಒಂದು ತಾರೆ. ಮಂಗಳ ಗ್ರಹಕ್ಕೂ ಸ್ಥಳೀಯರು ಈ ಹೆಸರನ್ನು ಕೊಟ್ಟಿದ್ದಾರೆ) ಆದವು. ಆ ಹೆಂಗಸರ ಮೇಲೆ ಆದ ಗಾಯಗಳ ಕಲೆಯೇ ತಾರೆಯ ಕೆಂಪು ಬಣ್ಣಕ್ಕೆ ಕಾರಣ. ಎಂದೂ ಮಾಸದ ಕಲೆ ಅದು.

(ಆಧಾರ: 1896ರಲ್ಲಿ ಪ್ರಕಟವಾದ K. Langloh Parker ಅವರ Australian Legendary Tales ಪುಸ್ತಕ)

## ಸಿಡ್ನಿ ಶ್ರೀನಿವಾಸ್

ಮೂಲತಃ ಬೆಂಗಳೂರಿನವರಾದ ಸಿಡ್ನಿ ಶ್ರೀನಿವಾಸ್ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ ಹಾಗೂ ಪಿಎಚ್. ಡಿ. ಪದವಿ ಪಡೆದಿದ್ದಾರೆ. ಸಿಡ್ನಿ ವಿಶ್ವವಿದ್ಯಾಲಯದ ‘ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್’ ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರು.

ಆಸ್ಟ್ರೇಲಿಯಾ ಮಾತ್ರವಲ್ಲದೇ ಜರ್ಮನಿ, ಜಪಾನ್, ಅಮೆರಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನು ಮಾಡಿದ್ದಾರೆ. ‘ಫ್ಲೂಯಿಡ್ ಮೆಕ್ಯಾನಿಕ್’, ‘ಆಪ್ಟಿಮೈಜೇಶನ್’ ವಿಷಯಗಳಲ್ಲಿ ಪರಿಣತರು. ಅವರ ಸುಮಾರು 100 ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. ‘ಶ್ರೀನಿವಾಸ ರಾಮಾನುಜನ್’, ‘ಗೆಲಿಲಿಯೊ’, ‘ನ್ಯೂಟನ್’, ‘ಆಲ್ಬರ್ಟ್ ಐನ್‌ಸ್ಟೈನ್’ ಈ ನಾಲ್ಕು ವಿಜ್ಞಾನಿಗಳ ಕುರಿತ ಪುಸ್ತಕಗಳು ಕನ್ನಡ, ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.